THE MYSORE LEGISLATIVE ASSEMBLY.

FOURTH DAY.

Thursday, 12th March 1953.

The House met in the Assembly Hall, Old Public Offices, Bangalore, at Twelve of the Clock.

Mr. SPEAKER (Sri H. Siddaiya, B.A., LL.B.) in the Chair.

QUESTIONS AND ANSWERS.

Acquisition of paddy from non-surplus holders in Kolar District.

Q.—55. **Sri H. C. LINGA REDDY** (Malur).—

Will the Government be pleased to state :—

(a) when the present procurement order was promulgated for the acquisition of paddy ;

(b) whether a list of surplus holders has been prepared in the Kolar District ;

(c) whether the terms of the Harvest Order have been duly complied with in the matter of procurement of foodgrains in the Kolar District ;

(d) whether it has come to their notice that acquisition of paddy is going on without preparation of a list of surplus holders ;

(e) whether it has come to their notice that acquisition is being made irrespective of the fact whether one is a surplus holder or not ;

(f) whether it has come to their notice that the people in the scarcity areas of the District are unable to give paddy as ragi crop has completely failed ?

A.—**Sri H. SIDDAVEERAPPA** (Minister for Home and Industries).—

(a) On 17th November 1952.

(*b*) Yes.

(*c*) Yes.

(d) Does not arise in view of reply to (*b*) above.

(e) No.

(f) The fact has been taken into account in assessing paddy from the holders concerned.

Sri H. C. LINGA REDDY.—May I know the number of surplus holders in the Kolar District ?

Sri H. SIDDAVEERAPPA.—Notice.

Sri H. C. LINGA REDDY.—When was this list prepared ?

Sri H. SIDDAVEERAPPA.—The list was prepared at the time the Harvest Order was passed.

Sri H. C. LINGA REDDY.—Was a list of surplus holders hung in the chavadies of each village before the acquisition was made ?

Sri H. SIDDAVEERAPPA.—All the terms and conditions that are imposed in the Harvest Order were fully complied with.

Sri H. C. LINGA REDDY.—May I know whether the list had been published in each village ?

Sri H. SIDDAVEERAPPA.—I know it was done according to rules. But this particular question I am not able to answer and I have not received any report to the contrary.

Sri H. C. LINGA REDDY.—Has it come to the notice of the Government that acquisition is made from non-surplus holders in the district ?

Sri H. SIDDAVEERAPPA.—No, sir.

Sri H. C. LINGA REDDY.—If it comes to the notice of the Government, will they give back the grains acquired from the non-surplus holders ?

Sri H. SIDDAVEERAPPA. It is a hypothetical question.

Sri H. C. LINGA REDDY.—My point is that it has been done ; will the Government deny or accept it ?

Sri H. SIDDAVEERAPPA.—Government do not accept it.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಾವೀಗ ಭತ್ತ ವಸೂಲಮಾಡಲು ತಯಾರಿಸಿರತಕ್ಕ ಪಟ್ಟಿಯಲ್ಲಿ ಈ ಹಿಂದೆ ಯಾರು ಯಾರು ಸರ್‌ಪ್ಲಸ್ ಹೋಲ್ಡರುಗಳಿಂದ ಪಟ್ಟಿ ತಯಾರಿಸಲಾಗಿತ್ತೋ ಅಂಥವರನ್ನೇ ಸೇರಿಸಲಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ವರ್ಷ ತಾವು ಅಸೆಸ್ ಮಾಡಿರುವ ಪ್ರಮಾಣಕ್ಕಿಂತಲೂ ಅಕ್ಯುಯಲ್ ಆಗಿ ವಸೂಲಿಮಾಡಿರುವುದರ ಪ್ರಮಾಣ ಶೇಕಡ 50 ರಷ್ಟು ಹೆಚ್ಚಾಗಿರುತ್ತದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Sri H. SIDDAVEERAPPA.—Due provision is also made in the Harvest Order either to add or subtract from that list.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ವರ್ಷ ಹಿಂದಿನ ಅನೇಕ ವರ್ಷಗಳಲ್ಲಿ ಧಾನ್ಯ ಸಂಗ್ರಹಣ ಆಗುತ್ತಿದ್ದುದಕ್ಕಿಂತಲೂ, ಎಂದರೆ ಸರ್‌ಪ್ಲಸ್ ಹೋಲ್ಡರುಗಳು ಸರೆಂಡರ್ ಮಾಡುತ್ತಿದ್ದ ಪ್ರಮಾಣಕ್ಕಿಂತಲೂ ಹೆಚ್ಚು ಧಾನ್ಯ ವಸೂಲಾಗಿರುತ್ತದೆಯೆಂದು ತಮಗೆ ಮನವರಿಕೆಯಾಗಿಲ್ಲವೇ ?

Sri H. SIDDAVEERAPPA.—I may bring to the notice of the Hon'ble Member that due provision is made there. That possibility is not excluded: I am not denying it.

ಶ್ರೀ ಎಚ್. ಹುಚ್ಚೇಗೌಡ.—ಸ್ವಾಮಿ, ಕೋಲಾರ ಜಿಲ್ಲೆಯನ್ನು ಕ್ಷಾಮಪೀಡಿತ ಪ್ರದೇಶವೆಂದು ಸಾರಿದ್ದು ಅಲ್ಲಿ ಕೇವಲ ಕಡಮೆ ಪ್ರಮಾಣದ ಧಾನ್ಯವಸೂಲಿ ಮಾಡಬೇಕೆಂದು ಹೇಳಿದ್ದುದು ನಿಜವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕಳೆದ ವರ್ಷಕ್ಕಿಂತ ಈ ವರ್ಷ ಅಲ್ಲಿ ಜಾಸ್ತಿ ಧಾನ್ಯ ವಸೂಲಾಗಿದೆಯೋ ಅಥವಾ ಕಡಮೆ ಧಾನ್ಯ ವಸೂಲಾಗಿದೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಕಡಮೆ ವಸೂಲಾಗಿದೆ.

ಶ್ರೀ ಎಚ್. ಹುಚ್ಚೇಗೌಡ.—ಕಡಮೆ ಎಂದರೆ ಎಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲಿಯತನಕ ಅಲ್ಲಿ ವಸೂಲಾಗಿರುವುದು ಕೇವಲ 3,585 ಪಲ್ಲ ಮಾತ್ರ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ವರ್ಷ ಅಲ್ಲಿ ಆಗಿರತಕ್ಕ ಬೆಳೆ ಎಷ್ಟೆಂಬುದು ಗೊತ್ತೆ ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೋಸ್ಕರವಾಗಿಯೇ ಕಡಮೆ ಧಾನ್ಯವನ್ನು ವಸೂಲುಮಾಡಲಾಗಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ತಾವೇನೋ ಹೀಗೆ ಹೇಳುತ್ತೀರಿ. ಅಲ್ಲಿ ನಿಮ್ಮ ಕೈಕೆಳಗಿನ ಅಧಿಕಾರಿಗಳು ಕೇವಲ ಒಂದು ಕೊಳಗ, 2 ಕೊಳಗ ಧಾನ್ಯ ಬೆಳೆದಿದ್ದವರೆಲ್ಲರಿಂದಲೂ ಧಾನ್ಯ ಸಂಗ್ರಹಣ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲೋ ಅಪ್ಪೀ ತಪ್ಪಿ ನಡೆದಿದ್ದ ಒಂದೆರಡು ಪ್ರಸಂಗಗಳು ನನ್ನ ಗಮನಕ್ಕೆ ಬಂದ ನಂತರ, ಜನರಿಗೆ ಹಾಗೆ ಕಿರುಕುಳ ಕೊಡಬಾರದೆಂದು ನೌಕರರುಗಳಿಗೆ ಸರಿಯಾದ ತಿಳುವಳಿಕೆ ಕೊಡಲಾಗಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇಂಥ ಅಕ್ರಮಗಳು ನಡೆದಲ್ಲಿ ಅದನ್ನು ತಮ್ಮ ಗಮನಕ್ಕೆ ತಂದರೆ ತಾವು ಅದನ್ನು ಸರಿಪಡಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥ ಕಿರುಕುಳವನ್ನು ಕೊಡಲೇಬಾರದೆಂದು ತಿಳುವಳಿಕೆ ಕೊಡಲಾಗಿದೆ.

Sri R K. PRASAD.—Are the Government aware that they have ordered disallowance of Rs. 10 to revenue officials because they could not reach the target figure ?

Sri H. SIDDAVEERAPPA.—I want notice for that.

Sri R. K. PRASAD.—If it comes to the notice of the Government, what action will they take in the matter ?

Sri H. SIDDAVEERAPPA.—I have already taken action. I assure the Hon'ble Member that no room will be given for any such complaint.

Sri R. K. PRASAD.—Have the Government not ordered disallowance of Rs. 10 to the revenue officials ?

Sri H. SIDDAVEERAPPA.—As I said, I want notice for that.

ಶ್ರೀ ಬಿ. ರಾಚಯ್ಯ.—ಯಳಂದೂರು ತಾಲ್ಲೂಕಿನಲ್ಲಿ ಕೇವಲ 10-20 ಕುಂಚೆ ಜಮೀನಿರತಕ್ಕವರಿಂದಲೂ ಕೂಡ ಧಾನ್ಯ ವಸೂಲುಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಬಿ. ರಾಚಯ್ಯ.—ಪತ್ರಿಕೆಗಳ ಮೂಲಕ ಕೊಡಲಾಗಿರುವ ಹೇಳಿಕೆಗಳಾದರೂ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಏನಾದರೂ ಅಕ್ರಮಗಳು ನಡೆದಿದ್ದಲ್ಲಿ ಅಂಥವುಗಳನ್ನು ನನ್ನ ಗಮನಕ್ಕೆ ತಂದರೆ ಅವುಗಳನ್ನು ಸರಿಪಡಿಸಲಾಗುತ್ತದೆ. ಈಗಾಗಲೆ ಜನರಿಗೆ ಅಂಥ ಕಿರುಕುಳ ಕೊಡಬಾರದೆಂದು ತಿಳುವಳಿಕೆಯನ್ನೂ ಸಹ ಕೊಡಲಾಗಿದೆ.

ಶ್ರೀ ವಿ. ವೆಂಕಟಪ್ಪ.—ತಾವು ಈಗ ತಯಾರಿಸಿರತಕ್ಕ ಪಟ್ಟಿಯಲ್ಲಿರುವ ಹೆಸರುಗಳಲ್ಲಿ ಸರ್‌ಪ್ಲಸ್ ಹೋಲ್ಡರುಗಳನ್ನೂ ಮತ್ತು ಹಿಂದೆ ತಾವುಯಾರು ಯಾರಿಂದ ದಬನವನ್ನು ಡಿಮ್ಯಾಂಡ್ ಮಾಡಿ ತೆಗೆದುಕೊಳ್ಳುತ್ತಿದ್ದಿರೋ ಅಂಥವರನ್ನೂ ಸೇರಿಸಿ ಪಟ್ಟಿಮಾಡಿದ್ದೀರೋ ಅಥವಾ ಬರೀ ಸರ್‌ಪ್ಲಸ್ ಹೋಲ್ಡರುಗಳನ್ನು ಮಾತ್ರ ಪಟ್ಟಿಗೆ ಸೇರಿಸಿದ್ದೀರೋ ?

ಶ್ರೀ ಎಚ್. ಸಿದ್ದವೀರಪ್ಪ.—ಇಬ್ಬರನ್ನೂ ಸೇರಿಸಿ ಪಟ್ಟಿ ತಯಾರಾಗಿದೆ

ಶ್ರೀ ವಿ. ವೆಂಕಟಪ್ಪ.—ಅದರಿಂದ ಹೇಗೆ ಕಂಡು ಹಿಡಿಯುತ್ತೀರಿ ?

Sri H. SIDDAVEERAPPA.—From the demand and actual surrender. I may bring to the notice of the Hon'ble Member the Paddy Acquisition (Harvest) Order, 1952, clause 6 which refers to the determination of paddy to be delivered by surplus holders. Who

is a surplus holder is defined under clause 3 (d) which is as follows :

"Surplus holder" means a holder who has been declared to be a surplus holder under clause 7 of the Articles of Food Acquisition (Harvest) Order, 1949, during any of the previous years and required to deliver to the Government not less than 24 seers of paddy, and such holders as may become surplus holders under clause 6 (III)."

ಶ್ರೀ ವಿ. ವೆಂಕಟಪ್ಪ.—ಹಿಂದೆ ಕಂಚ್ರೋಲಿದ್ದ ಕಾಲದಲ್ಲಿ ತಾವು ಯಾರು ಯಾರಿಂದ ದವಸ ಶೇಖರಣೆ ಮಾಡುತ್ತಿದ್ದಿರೋ ಅಂಥವರನ್ನೂ ಸಹ ಈಗ ಸರ್‌ಪ್ಲಸ್ ಹೋಲ್ಡರುಗಳೆಂದು ಭಾವಿಸಿ, ಅವರನ್ನು ಸರ್‌ಪ್ಲಸ್ ಹೋಲ್ಡರುಗಳ ಪಟ್ಟಿಗೆ ಸೇರಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥ ಹಂದಿದ್ದವರ ಪೈಕಿ ಯಾರು ಯಾರು ಸರ್‌ಪ್ಲಸ್ ಹೋಲ್ಡರುಗಳೆಂದು ಪರಿಗಣಿಸಲು ಅರ್ಹರಾಗಿದ್ದಾರೋ ಅಂಥವರನ್ನೆಲ್ಲಾ ಅದರಲ್ಲಿ ಸೇರಿಸಲಾಗಿದೆ.

ಶ್ರೀ ವಿ. ವೆಂಕಟಪ್ಪ.—ಹಿಂದೆ ದವಸ ಧಾನ್ಯಗಳೇ ನನ್ನೂ ಸರ್ಕಾರಕ್ಕೆ ಕೊಡದಿದ್ದಂಥವರನ್ನೂ ಸಹ ಈ ಸರ್‌ಪ್ಲಸ್ ಹೋಲ್ಡರುಗಳ ಪಟ್ಟಿಯಲ್ಲಿ ತಾವು ಸೇರಿಸಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ವಿ. ವೆಂಕಟಪ್ಪ.—ಅಂಥವರನ್ನೂ ಸಹ ಸೇರಿಸಿ ಪಟ್ಟಿ ತಯಾರಿಸಲಾಗಿರುತ್ತದೆಯೆಂಬುದನ್ನು ಈಗಿನ ಮಾನ್ಯ ರೆವೆನ್ಯೂ ಮಂತ್ರಿಗಳ ಗಮನಕ್ಕೆ ತರಲಾಗಿದೆಯೇ ?

ಒಬ್ಬ ಸದಸ್ಯರು.—ಎಲ್ಲಿ ? ಚನ್ನಪಟ್ಟಣದಲ್ಲೇ ?

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ಚನ್ನಪಟ್ಟಣ ತಾಲ್ಲೂಕಿನಲ್ಲಿ ಅಂಥ ಒಂದೆರಡು ನಿದರ್ಶನಗಳನ್ನು ನನ್ನ ಗಮನಕ್ಕೆ ತರಲಾಗಿದೆ.

ಶ್ರೀ ವಿ. ವೆಂಕಟಪ್ಪ.—ಅಂದಮೇಲೆ ಈ ವಿಚಾರ ಸರ್ಕಾರದ ಗಮನಕ್ಕೆ ಬಂದ ಹಾಗೆ ಆಗಲಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಈಗಾಗಲೇ ಸರ್ಕಾರಿ ಅಧಿಕಾರಿಗಳಿಗೆ ಆ ರೀತಿ ಒತ್ತಾಯಪಡಿಸಬಾರದೆಂದು ತಿಳಿಸಿದ್ದೇವೆ. ಎಲ್ಲ ತಿಳುವಳಿಕೆಗಳನ್ನೂ ಕೊಟ್ಟಿರುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಅಂಥ ಅಕ್ರಮಗಳು ನಡೆದಿದ್ದರೆ, ಅಂಥವುಗಳನ್ನು ತಮ್ಮ ಗಮನಕ್ಕೆ ತಂದರೆ ತಾವು ಅದನ್ನು ಪರಿಹಾರ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲಾದರೂ ಅಪ್ಪಿ ತಪ್ಪಿ ಒಂದು ಹಾಗಾಗಿರಬಹುದು.

ಶ್ರೀ ವಿ. ವೆಂಕಟಪ್ಪ.—ಎಲ್ಲವೂ ಹಾಗೆಯೇ ಆಗಿದ್ದರೆ ಏನುಮಾಡುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗಾಗಲು ಅವಕಾಶವೇ ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ನಮ್ಮ ನಂಜನಗೂಡು ಸಬ್ ಡಿವಿಜನ್ನಿನಲ್ಲಿ, ಅಂದರೆ ಟಿ. ನರಸೀಪುರ ಮುಂತಾದ ತಾಲ್ಲೂಕುಗಳಲ್ಲಿ ಹೋದ ವರ್ಷಕ್ಕಿಂತಲೂ ಈ ವರ್ಷ ದವಸವನ್ನು ಹೆಚ್ಚಾಗಿ ವಸೂಲುಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್; ಭತ್ತ ಮಾತ್ರ ಸ್ವಲ್ಪ ಹೆಚ್ಚಿಗೆ ವಸೂಲುಮಾಡಿದ್ದಾರೆ. ನಾವು ಯಾರಿಗೆ 100 ಪಲ್ಲ ಕೊಡಬೇಕೆಂದಿದ್ದೆವೋ ಅಂಥವರಲ್ಲಿ ಕೆಲವರು ತಾವಾಗಿಯೇ ಮುಂದೆ ಬಂದು 120 ಪಲ್ಲ ಒಪ್ಪಿಸಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ನಿಮ್ಮ ಅಧಿಕಾರಿಗಳು ಹಾಗೆ ಹೆದರಿಸಿ, ಬೆದರಿಸಿ ರೈತರಿಂದ ವಸೂಲುಮಾಡುತ್ತಿರುವುದು ನಿಜವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥ ಸಂಪ್ರದಾಯ ನಮ್ಮಲ್ಲಿಲ್ಲ.

ಶ್ರೀ ಯು. ಎಂ. ಮಾದಪ್ಪ.—ನೀವು ನಿಮ್ಮ ಅಧಿಕಾರಿಗಳಿಗೆ ಹಾಗೆ ವಸೂಲುಮಾಡಬೇಕೆಂದು ತಿಳುವಳಿಕೆ ಕೊಟ್ಟಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಹೋಗಲಿ ; ಹೋದ ವರ್ಷಕ್ಕಿಂತ ಈ ವರ್ಷ ಅಲ್ಲಿ ಜಾಸ್ತಿ ದವಸ ವಸೂಲಾಗಿರುತ್ತದೆಯೆಂಬುದನ್ನಾದರೂ ಒಪ್ಪುತ್ತೀರಾ ?

Sri H. SIDDAVEERAPPA.—Somewhere about 90 to 96 percent.

ಶ್ರೀ ಯು. ಎಂ. ಮಾದಪ್ಪ.—ರೈತರಿಂದ ಅವರ ಜೀವನಕ್ಕೂ ಸಹ ಸಾಕಾದಷ್ಟು ಇಲ್ಲದಂತೆ ಎಲ್ಲವನ್ನೂ ವಸೂಲು ಮಾಡುತ್ತಿದ್ದಾರೆಂದು ಹೇಳಿದರೆ ಅದನ್ನು ಒಪ್ಪುತ್ತೀರಾ ?

(No answer.)

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಇದುವರೆಗೂ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಎಷ್ಟುಪರ್ಸೆಂಟ್ ಪ್ರೊಕ್ಯೂರ್ ಮಾಡಿದ್ದೀರಿ ?

Mr. SPEAKER.—That has been answered.

Mr. SPEAKER.—Questions No. 87 and 297 are both of similar nature and they may be taken up together.

———

Financial aid received from the Central Government during 1952-53.

Q.—87. Sri G. NARAYANA GOWDA (Mulbagal-Srinivaspur).—

Will the Government be pleased to state :—

(a) the financial aid they have received in the form of loan and grant from the Union Government during 1952-53 ;

(b) the purpose for which the State Government has contemplated to make use of the same ?

A.—Sri H. SIDDAVEERAPPA (Minister for Home and Industries).—

(a) The following statement shows the grants and loans promised by the Government of India.

(b) They are being spent for the purposes shown against each of them.